

# ಹಳದಿ ಬಿಲ್ವ

ಗಿಡಮರಗಳೆಲ್ಲ ಸಾಮಾನ್ಯವಾಗಿ ಹಸಿರಾಗಿರುವುದು ಒಂದು ಪ್ರಾಕೃತಿಕ ವಿದ್ಯಮಾನ. ಎಲೆಗಳಲ್ಲಿರುವ 'ಹರಿತ್ತು' ಹಸಿರು ಬಣ್ಣಕ್ಕೆ ಕಾರಣವಾಗಿರುತ್ತದೆ. ಆದರೂ ಕೆಲ ಸಸ್ಯಗಳ ಎಲೆಗಳು ಬಿಳಿ, ಹಳದಿ, ಕೆಂಪು ಮುಂತಾದ ಬಣ್ಣದಿಂದಿರುವುದಕ್ಕೆ ಹೂವಿನ ವರ್ಣದ್ರವ್ಯ (ಕ್ರೋಮೋಪ್ಲಾಸ್ಟ್)ಗಳು ಕಾರಣವಾಗಿರುತ್ತವೆ. ಆದರೆ ಇದು ಪರಿಸರದೊಂದಿಗಿನ ಸಾಂದರ್ಭಿಕ ಮಾರ್ಪಾಡಷ್ಟೆ.

ಆದರೆ ಇಲ್ಲೊಂದು ಬಿಲ್ವ ವೃಕ್ಷವಿದ್ದು, ಅದರ ಇಡೀ ಚಿಗುರು, ಎಲೆ, ಕಾಯಿಗಳೆಲ್ಲ ಈ ಹಿಂದೆ ಸಹಜ ಹಸಿರಾಗಿಯೇ ಇದ್ದು, ಈಗ್ಗೆ ಎರಡು ವರ್ಷದಿಂದ ಸಂಪೂರ್ಣವಾಗಿ ಹಳದಿ ಬಣ್ಣದಿಂದ ಕಂಗೊಳಿಸುತ್ತಿದೆ. ನೋಡುಗರಿಗೆ ವಿಚಿತ್ರವೆನಿಸಿದೆ. ಪರಿಸರದ ಪ್ರಭಾವವೋ, ಭೂಗುಣದ ವಿಶೇಷತೆಯೋ  ಬಿಲ್ವ ಪ್ರಿಯನಾದ ಆ ಶಿವನಿಗೇ ಗೊತ್ತು. ಬಿಲ್ವದ ಪ್ರತಿ ಭಾಗಗಳೂ ಔಷಧಿಯುಕ್ತವಾಗಿ ಉಪಯೋಗಿಸಲ್ಪಡುತ್ತಿರುವುದರಿಂದ, ಈ ಹಳದಿ ಎಲೆಗಳಲ್ಲಿ ಅದಾವ ರೋಗ ನಿವಾರಕ ಗುಣವಿದೆಯೋ ಉಪಯೋಗಿಸಿಯೇ ನೋಡಬೇಕು. ಅಂದ ಹಾಗೆ ಈ ಗಿಡ/ ಮರವಿರುವುದು ತವನಿಧಿಯಲ್ಲಿನ ಶ್ರೀ ಶೈಲ ಮಠದ ಆವರಣದಲ್ಲಿ. ಇತರೆಲ್ಲ ಬಿಲ್ವ ವೃಕ್ಷಗಳು ಹಸಿರಾಗಿದ್ದು, ಇದೊಂದು ಮಾತ್ರ ಹಳದಿಯಾಗಿದೆ.

**-ಎಸ್. ಓಂಕಾರಯ್ಯ ತವನಿಧಿ**

# ಕದಂಬರ ಸಮರ ನಾಯಕಿ

ಉತ್ತರಕನ್ನಡ ಜಿಲ್ಲೆಯಲ್ಲಿನ ಅನೇಕ ಕಡೆಗಳಲ್ಲಿ ಕದಂಬರ ಕಾಲದ ಐತಿಹ್ಯಗಳು ಪತ್ತೆಯಾಗಿವೆ. ಯಲ್ಲಾಪುರ ತಾಲ್ಲೂಕಿನ ಹೊನಗದ್ದೆಯಲ್ಲಿ ಇತ್ತೀಚೆಗೆ ಕಾಡಿನಲ್ಲಿ ಕಂಡ ಇದು ಧ್ಯಾನಸ್ಥ ಭಂಗಿಯಲ್ಲಿದ್ದು ಆಯುಧವನ್ನು ಪಕ್ಕದಲ್ಲಿ ಇರಿಸಿಕೊಂಡು ಮುಡಿಕಟ್ಟಿ, ಯುದ್ಧಕ್ಕೆ ಸಿದ್ಧಳಾದ ಸ್ತ್ರೀರೂಪದ ವಿಗ್ರಹವಾಗಿದೆ. ಐದು ಅಡಿ ಎತ್ತರದ ಚೂರು ಭಗ್ನಗೊಂಡ ಇಂತಹ ವಿಗ್ರಹಗಳ ಸಂಶೋಧನೆ ಆಗಬೇಕಿದೆ.

**ಚಿತ್ರ- ಬರಹ: ದತ್ತಾತ್ರೇಯ ಭಟ್ಟ ಕಣ್ಣಿಪಾಲ**





# ಕಂಬದ ಖಾಲಿ ಜಾಗ

ಚಿತ್ರದಲ್ಲಿರುವ ಕಂಬ ನುಗ್ಗೇಹಳ್ಳಿಯ ತ್ರಿಕೂಟಾಚಲ ದೇವಾಲಯದಲ್ಲಿದೆ. ಹೊಯ್ಸಳರ ಕಾಲದ ಈ ದೇವಾಲಯದ ಶಿಲ್ಪ ಚಿತ್ತಾರದ ಕಂಬವೊಂದರಲ್ಲಿ ಸ್ವಲ್ಪ ಭಾಗವನ್ನು ಶಿಲ್ಪಿ ಖಾಲಿ ಬಿಟ್ಟಿದ್ದಾನೆ.  ಶಿಲ್ಪ ಸೌಂದರ್ಯ ನಿರ್ಮಾಣದಲ್ಲಿ ತಾನು ಏನಾದರೂ ಬಿಟ್ಟಿದ್ದರೆ ಅದನ್ನು ಈ ಖಾಲಿ ಜಾಗದಲ್ಲಿ ತುಂಬಿಸಲಿ ಎಂದಿರಬಹುದು.  ಈ ಖಾಲಿ ಜಾಗವನ್ನು ತುಂಬಬಲ್ಲ ಶಿಲ್ಪಿ ಎಂದು ಬರುತ್ತಾನೋ!

**-ಶಶಿರೇಖ ನಾಗೇಂದ್ರ, ತುಮಕೂರು**